# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

## ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

## ನಾಯನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

**ದಿನಾಂಕ: 13.10.2020**

### ಈ ವಾರದ ಮುನ್ಸೂಚನೆ (13.10.20 ರಿಂದ 17.10.20 ರ ವರೆಗೆ)

| ನಿಯತಾಂಕಗಳು | 13-10-20 | 14-10-20 | 15-10-20 | 16-10-20 | 17-10-20 |
|---|---|---|---|---|---|
| ಮಳೆ (ಮಿ.ಮಿ.) | 4.9 | 1.2 | 0.3 | 5.2 | 11.6 |
| ಗರಿಷ್ಠ ಉಷ್ಣಾಂಶ(ಡಿ.ಸೆ.) | 24.9 | 25 | 25.6 | 26.4 | 27.8 |
| ಕನಿಷ್ಠ ಉಷ್ಣಾಂಶ (ಡಿ.ಸೆ.) | 19.2 | 18.8 | 19.2 | 19.5 | 18.9 |
| ಮೋಡ (ಪ್ರಮಾಣ) | 8 | 8 | 6 | 8 | 8 |
| ಅರ್ದ್ರತೆ 7.20 ಬೆ (ಶೇ) | 94 | 90 | 93 | 95 | 97 |
| ಅರ್ದ್ರತೆ 2.20 ಮ (ಶೇ) | 78 | 77 | 74 | 73 | 70 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 18 | 19 | 21 | 17 | 15 |
| ಗಾಳಿಯ ದಿಕ್ಕು (ಡಿಗ್ರಿ) | 246 | 249 | 248 | 248 | 248 |

**ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ನಾಯನಹಳ್ಳಿ ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳು ಮೋಡ ಕವಿದ ವಾತಾವರಣವಿದ್ದು, ಮಳೆಯಾಗುವ ಸಂಭವವಿದೆ, ದಿನದ ಗರಿಷ್ಠ ಉಷ್ಣಾಂಶವು 24-27°C ಮತ್ತು ಕನಿಷ್ಠ 18–20°C ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 90–97% ಇದ್ದು, ಮಧ್ಯಾಹ್ನ 70–78% ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 15–21 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.**

ಚಿತ್ತ ಮಳೆಯ ಕಾಲವು ಅಕ್ಟೋಬರ್ ತಿಂಗಳ 11 ರಿಂದ ಅಕ್ಟೋಬರ್ 23 ರವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 55.4 ಮಿ. ಮೀ. ವರೆಗೆ ಮಳೆಯಾಗುತ್ತದೆ.

### ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಮುಂದಿನ ನಾಲ್ಕೈದು ದಿನಗಳಲ್ಲಿ ಸಾಧಾರಣದಿಂದ ಹೆಚ್ಚುಮಳೆಯಾಗುವ ಸಂಭವವಿದೆಇದಕ್ಕೆ ಪರ್ಯಾಯಕಡಿಮೆಅವಧಿ ಬೆಳೆಗಳಾದ ಮೇವಿನ ಮುಸುಕಿನ ಜೋಳ, ಅವರೆ, ರಾಗಿ, ಅಲಸಂದೆ ಹಾಗೂ ಕಿರು ಧಾನ್ಯಗಳಾದ ನವಣೆ, ಸಜ್ಜೆ, ಇತ್ಯಾದಿ ಬೆಳೆಗಳನ್ನು ಬೆಳೆಯಬೇಕೆಂದು ಸೂಚಿಸಲಾಗಿದೆ.
- ಎಲ್ಲೆಲ್ಲಿ ದೀರ್ಘಾವದಿ ಬೆಳೆಗಳು (ತೊಗರಿ ಮತ್ತು ಹರಳು) ಬಿತ್ತನೆ ಮಾಡಿದಲ್ಲಿ ಕಳೆ ನಿರ್ವಹಣೆ, ಮಣ್ಣು ಮತ್ತು ನೀರಿನ ಸಂರಕ್ಷಣೆಗೆ ಅಂತರ ಬೇಸಾಯವನ್ನು ಕೈಗೊಳ್ಳುವುದು.
- ಮೆಕ್ಕೆಜೋಳ: ತೇವಾಂಶದ ಸಂರಕ್ಷಣೆಗಾಗಿಇರುವಂತಹ ಕಳೆಯನ್ನು ನಿರ್ವಹಣೆ ಮಾಡಿಕಿತ್ತಂತಹ ಕಳೆಯನ್ನು ಭೂಮಿಗೆ ಹೊದಿಕೆ ಮಾಡಬೇಕು.
- ಮಳೆ ಬಂದತಕ್ಷಣ 25 ಕಿ. ಗ್ರಾಂ. ಸಾರಜನಕವನ್ನು ಪ್ರತಿ ಹೆಕ್ಟೆರಿಗೆ ಮೇಲು ಗೊಬ್ಬರವಾಗಿ ಉಪಚರಿಸಿ.

- ಅಲಸಂದೆ ಬೆಳೆಯಲ್ಲಿ ಸಿ–152 ಮತ್ತು ಕೆ.ಎಮ್–5, ಟಿ.ವಿ.ಎಕ್ಸ್–944. ಅಥವಾತರಕಾರಿಗಾಗಿ ಪಿ.ಕೆ.ಬಿ–4 ತಳಿಯನ್ನು ಆಯ್ಕೆ ಮಾಡಿಕೊಳ್ಳಬಹುದು.
- ಅವರೆ: ಎಚ್.ಎ–3 ಮತ್ತು4 ತಳಿಯನ್ನು ಆಯ್ಕೆ ಮಾಡಿಕೊಳ್ಳಬಹುದು.
- ದ್ವಿದಳ ಧಾನ್ಯ ಬೆಳೆಗಳನ್ನು ಬಿತ್ತುವ ಮುನ್ನಜೈವಿಕ ಗೊಬ್ಬರಗಳಾದ ರೈಜೋಬಿ೦ಯುಮ್ ನಿಂದ ಬೀಜೋಪಚಾರ ಮಾಡಬೇಕು.

ಜಾನುವಾರು:

- ಜಾನುವಾರು, ರೇಷ್ಮೆ ಹಾಗೂ ಕೋಳಿ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು.
- ಜಂತು ಹುಳುಗಳ ನಿವಾರಣೆಗಾಗಿ ಪಶುವೈದ್ಯರ ಸಲಹೆ ಪಡೆದು ಸೂಕ್ತವಾದ ಜಂತು ನಿವಾರಕ ಔಷಧಿಯನ್ನು ಕರು ಹುಟ್ಟಿದ 7ನೆಯ ದಿನ, 1 ನೆಯ ತಿಂಗಳು , 6 ನೆಯ ತಿಂಗಳು ತಪ್ಪದೆ ಹಾಕಬೇಕು.

ಸಸ್ಯ ಸಂರಕ್ಷಣೆ:

- ಥ್ರಿಪ್ಸ್/ಹೇನು/ಎಫಿಡ್ಸ್ ಹಾಗೂ ಇನ್ನಿತರೆರಸ ಹೀರುವ ಕೀಟಗಳ ನಿಯಂತ್ರಣಕ್ಕೆಅಕ್ತ್ರ (1ಗ್ರಾಂ/ಲೀ) ಅಥವಾಇಮಿಡಾಕ್ಲೋಪ್ರಿಡ್ (2.0 ಮಿ.ಲೀ/ಲೀ) ಅಥವಾ ಶೇ. 4 ರಷ್ಟು ಬೇವಿನ ಕಷಾಯ/ಎಣ್ಣೆಯನ್ನು ಸಿಂಪಡಣೆ ಮಾಡಬೇಕು.
- ಗುಲಾಬಿ: ಕಬ್ಬಿಣದಕೊರತೆಯಿಂದ ಎಲೆಗಳು ಹಳದಿ ಬಣ್ಣಕ್ಕೆತಿರುಗುತ್ತವೆ. ಹತೋಟಿ ಮಾಡಲು ಬಯೋ–20 ಅಥವಾ ಮಲ್ಟಿಪ್ಲೆಕ್ಸ್‌ನ ಲಘು ಪೋಷಕಾಂಶಗಳನ್ನು ಕೊಡಬೇಕು. ಗುಲಾಬಿಯಲ್ಲಿ ಎಲೆ ಹಾಗೂ ಮೊಗ್ಗು ತಿನ್ನುವ ಕೀಟ ಕಂಡುಬಂದಲ್ಲಿ 2 ಎಂ.ಎಲ್ ಮೆಲಾಥಿಯಾನ್ (500 ಮೀ. ಲೀ ಪ್ರತಿ ಎಕರೆಗೆ) ಸಿಂಪಡಿಸಿ, ಕಪ್ಪು ಎಲೆ ಚುಕ್ಕೆ ರೋಗಕಂಡು ಬಂದಲ್ಲಿ, 1 ಎಂ.ಎಲ್ ಪ್ರೋಪಿಕೊನೊಜೇಲ್ (200 ಮೀ. ಲೀ ಪ್ರತಿಎಕರೆಗೆ) ಸಿಂಪಡಿಸಿ.
- ನೆಲಗಡಲೆಯಲ್ಲಿ ಎಲೆ ಚುಕ್ಕೆ ರೋಗಕಂಡುಬಂದರೆ, ಕಾರ್ಬಂಡೈಜೀಮ್‌ಅನ್ನು ಸಿಂಪಡಿಸಿ, ನೆಲಗಡಲೆಯಲ್ಲಿ ತುಕ್ಕು ರೋಗ ಕಂಡುಬಂದರೆ, ಕಾರ್ಬಕ್ಸಿನ್ (0.5 ಮೀ. ಲೀ ಪ್ರತಿ ಲೀಟರ್) ಅನ್ನು ಸಿಂಪಡಿಸಿ.
- ಮೆಕ್ಕೆಜೋಳ: ಕಾಂಡಕೊರಕದ ಹುಳುವಿನ ಹತೋಟಿಗೆ ಕ್ವಿನಾಲ್‌ಫಾಸ್–25 ಇ.ಸಿ. ಕೀಟನಾಶಕವನ್ನು2 ಮಿ. ಲೀ/ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಿ. ಅಥವಾ ಕ್ಲೋರೋಪೈರಿಫಾಸ್–20 ಇ.ಸಿ. ಕೀಟನಾಶಕವನ್ನು2 ಮಿ. ಲೀ/ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಿ.
- ತೊಗರಿ: ಸೊರಗುರೋಗಕಂಡು ಬಂದಲ್ಲಿಅಂತಹ ಗಿಡಗಳನ್ನು ಬುಡ ಸಹಿತ ಕೀಳಬೇಕು ಮತ್ತುಕಾರ್ಬಂಡೈಝಿಮ್ 2 ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಿ ಹಾಗೂ ಕಾಯಿ ಕೊರಕಕೀಟದ ಬಾಧೆಕಂಡು ಬಂದಲ್ಲಿಇಂಡಾಕ್ಸಿಕಾರ್ಬೋ 1 ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಿ.
- ಹೂ ಕೋಸು ಹಾಗೂ ಎಲೆ ಕೋಸುನಲ್ಲಿ ಎಲೆ ತಿನ್ನುವ ಹುಳು (ಡೈಮಂಡ್ ಬ್ಯಾಕ್ ಮಾತ್) ಕಂಡು ಬಂದಲ್ಲಿ ಬೇವಿನ ಕಷಾಯ/ಎಣ್ಣೆಯನ್ನು ಸಿಂಪಡಣೆ ಮಾಡಬೇಕು.

**ನೋಡಲ್ ಅಧಿಕಾರಿ**
ಕೃಷಿ ಹವಾಮಾನ ವಿಭಾಗ
**ಕೃಷಿ ವಿಶ್ವವಿದ್ಯಾನಿಲಯ,**
**ಬೆಂಗಳೂರು**